ಡಿ-72-1425 | (46)

**<u>ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಆರ್.ಪ್ರಸನ್ನಕುಮಾರ್ ರವರು ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ</u>**

**ಸೂಚನೆ : ಶಿವಮೊಗ್ಗ ನಗರದಲ್ಲಿ ದಿನಾಂಕ: 03.12.2020 ರಿಂದ 144 ಸೆಕ್ಷನ್ ಜಾರಿ ಮಾಡಲಾಗಿದ್ದು, ಇದರಿಂದ ಅಂಗಡಿ ಮುಗ್ಗಟ್ಟುಗಳು, ಹೋಟೆಲ್‌ಗಳು ಬಂದ್ ಮಾಡಲಾಗಿದ್ದು ಸಣ್ಣ ಬೀದಿ ವ್ಯಾಪಾರಿಗಳಿಗೆ ಹಾಗೂ ಪ್ರತಿನಿತ್ಯ ಅಗತ್ಯ ದಿನಸಿ ಸಾಮಾಗ್ರಿಗಳ ಪೂರೈಕೆಯು ಸ್ಥಗಿತವಾಗಿದ್ದು, ಆಟೋ ಚಾಲಕರು ಹಾಗೂ ಪ್ರತಿನಿತ್ಯ ಕಾರ್ಯನಿಮಿತ್ತ ನೆರೆಹೊರೆ ತಾಲ್ಲೂಕುಗಳಿಂದ ನಗರಕ್ಕೆ ಆಗಮಿಸುವ ಜನರಿಗೆ ಓಡಾಡಲು ಅನಾನುಕೂಲವಾಗಿರುತ್ತದೆ. ಇದರಿಂದ ಅಲ್ಲಿನ ಸಾರ್ವಜನಿಕರು ಕರ್ಫ್ಯೂ ಮಾದರಿಯಲ್ಲಿ ತೊಂದರೆಯನ್ನು ಅನುಭವಿಸುತ್ತಿರುವ ಬಗ್ಗೆ.**

ಉತ್ತರ : ದಿನಾಂಕ: 03.12.2020ರಂದು ಬೆಳಿಗ್ಗೆ ಶಿವಮೊಗ್ಗ ನಗರದ ಕೋಟೆ ಠಾಣಾ ವ್ಯಾಪ್ತಿಯಲ್ಲಿ ಭಜರಂಗ ದಳ ಸಂಚಾಲಕ ಶ್ರೀ ನಾಗೇಶ್.ಎಸ್. ಈತನ ಮೇಲೆ ಅಪರಿಚಿತ ವ್ಯಕ್ತಿಗಳು ಹಲ್ಲೆ ನಡೆಸಿದ ಸಂಬಂಧವಾಗಿ ಕೋಟೆ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ.146/2020 ಕಲಂ 120(ಬಿ) 341, 504, 324, 307 ಸಹಿತ 34 ಐ.ಪಿ.ಸಿ. ಪ್ರಕರಣ ದಾಖಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಶಿವಮೊಗ್ಗ ನಗರದಲ್ಲಿ ಅಹಿತಕರ ಘಟನೆಗಳು ನಡೆದು ಒಟ್ಟು 14 ಪ್ರಕರಣಗಳು ದಾಖಲಾಗಿರುತ್ತವೆ.

ಪ್ರಮುಖವಾಗಿ ಚೆಕ್ಕಿನ ಕಲ್ಮಠ, ಬಿ.ಹೆಚ್.ರಸ್ತೆ ಬಸ್‌ಸ್ಟ್ಯಾಂಡ್ ಏರಿಯಾ, ಆಲ್ಕೋಳ, ತುಂಗಾನಗರ ಠಾಣಾ ವ್ಯಾಪ್ತಿಯ ಬೈಪಾಸ್‌ರಸ್ತೆ, ಸವಾಯಿ ಪಾಳ್ಯ, ನ್ಯೂಬ್ರಿಡ್ಜ್ ಏರಿಯಾಗಳಲ್ಲಿ ಗುಪ್ತ ಮಾಹಿತಿ ವರದಿಯಿಂದ ಶಿವಮೊಗ್ಗ ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಹಾಗೂ ಸಾರ್ವಜನಿಕ ಸುವ್ಯವಸ್ಥೆ ಮತ್ತು ಶಾಂತತೆಗೆ ಭಂಗ ಉಂಟಾಗದಿರುವಂತೆ ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ವರದಿಯ ಮೇರೆಗೆ ತಹಶೀಲ್ದಾರ್ ಮತ್ತು ತಾಲ್ಲೂಕು ಕಾರ್ಯನಿರ್ವಾಹಕ ದಂಡಾಧಿಕಾರಿಗಳು, ಶಿವಮೊಗ್ಗ ತಾಲ್ಲೂಕು ರವರು ಶಿವಮೊಗ್ಗ ನಗರದಲ್ಲಿ ಕಲಂ 144 ಸಿಆರ್‌ಪಿಸಿ ರೀತ್ಯ ನಿಷೇಧಾಜ್ಞೆಯನ್ನು ವಿಧಿಸಿರುತ್ತಾರೆ.

ಈ ಸಮಯದಲ್ಲಿ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಕಲಂ 144 ಸಿಆರ್‌ಪಿಸಿ ರೀತ್ಯ ನಿಷೇಧಾಜ್ಞೆ ವಿಧಿಸಿದ್ದರಿಂದ ಹೊರಜಿಲ್ಲೆ/ತಾಲ್ಲೂಕುಗಳಿಂದ ನಗರಕ್ಕೆ ಆಗಮಿಸುವ ಕೆಎಸ್‌ಆರ್‌ಟಿಸಿ ಬಸ್, ಖಾಸಗಿ ಬಸ್/ವಾಹನಗಳಿಗೆ ಹಾಗೂ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಕ್ರಮ ಕೈಗೊಳ್ಳಲಾಗಿರುತ್ತದೆ.

**<u>ಕಲಂ 144 ಸಿಆರ್‌ಪಿಸಿ ಸೆಕ್ಷನ್ ಜಾರಿಯಲ್ಲಿದ್ದ ದಿನಾಂಕ ಮತ್ತು ಸಮಯ:</u>**

1. ದಿನಾಂಕ: 03.12.2020 ರಂದು ಮಧ್ಯಾಹ್ನ 3.00 ಗಂಟೆಯಿಂದ ದಿನಾಂಕ: 05.12.2020ರಂದು ಬೆಳಿಗ್ಗೆ 10.00 ಗಂಟೆವರೆಗೆ
2. ದಿನಾಂಕ: 05.12.2020 ರಂದು ಬೆಳಿಗ್ಗೆ 10.00 ಗಂಟೆಯಿಂದ ದಿನಾಂಕ: 07.12.2020ರಂದು ಬೆಳಿಗ್ಗೆ 10.00 ಗಂಟೆವರೆಗೆ
3. ದಿನಾಂಕ: 07.12.2020 ರಿಂದ ದಿನಾಂಕ: 09.12.2020ರಂದು ಬೆಳಿಗ್ಗೆ 10.00 ಗಂಟೆಯವರೆಗೆ ಮತ್ತು
4. ದಿನಾಂಕ: 09.12.2020 ರಂದು ಬೆಳಿಗ್ಗೆ 10.00 ಗಂಟೆಯಿಂದ ದಿನಾಂಕ: 12.12.2020 ರಂದು ಬೆಳಿಗ್ಗೆ 10.00 ಗಂಟೆವರೆಗೆ

ಈ ಸಂದರ್ಭದಲ್ಲಿಯೂ ಸಹ ಯಾವುದೇ ಸಾರ್ವಜನಿಕರಿಗೂ ಸಹ ತೊಂದರೆ ಆಗದಂತೆ ನಿಗಾವಹಿಸಿ ಅವಶ್ಯ ಕ್ರಮ ತೆಗೆದುಕೊಳ್ಳಲಾಗಿರುತ್ತದೆ.

---

ಹೆಚ್‌ಡಿ 461 ಎಸ್‌ಎಸ್‌ಟಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು